3 Ashurkhana Sunni, Turuvekere
4 Ashurkhana Sunni Mayasandra, Turuvekere Tq
5 Ashurkhana Sunni, aga Devanayakanahalli, Turuvekere Tq
6 Ashurkhana Sunni, Chandur

III IDGAHS

1 Idgah, (Sunni), Bannasandra, Turuvekere Tq
2 Idgah, (Sunni), Turuvekere Tq
3 Idgah, (Sunni), Mayasandra, Turuvekere Tq
4 Idgah, & Khabrasthan, Thandga,
5 Idgah, (Sunni), Dasihalli,
6 Idgah, (Sunni), Beechanahally,
7 Idgah, (Sunni), Devanayakanahalli,
8 Idgah, (Sunni), Doddamaligere

IV KHABRASTHANS

1 Khabrasthan, Mayasandra,
2 Khabrasthan, Dasihalli
3 Khabrasthan, Nagalapura,
4 Khabrasthan, Talakere

Total 37 Wakf Institutions

476(748) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪಶುಸಂಪತ್ತು ಕ್ಷೀಣಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಕಳೆದ 3 ವರ್ಷಗಳಿಂದ ಯಾವ ಪ್ರಮಾಣದಲ್ಲಿ ಪಶುಸಂಪತ್ತು ಕ್ಷೀಣಿಸುತ್ತಿವೆ (ವರ್ಷವಾರು ಹಾಗೂ ವರ್ಗವಾರು ಮಾಹಿತಿಒದಗಿಸುವುದು)

ಇ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಪಶುಸಂಪತ್ತಿನ ಸಂಖ್ಯೆ ಎಷ್ಟು (ವರ್ಗವಾರು ಮಾಹಿತಿನೀಡುವುದು)

ಈ) ಪಶುಗಣತಿಯನ್ನು ಎಷ್ಟು ವರ್ಷಗಳಿಗೊಮ್ಮೆ ಮಾಡಲಾಗುತ್ತದೆ.

ಉ) ರಾಜ್ಯದಲ್ಲಿ ಪಶು ಸಂಪತ್ತನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರ ಹಾಕಿ ಕೊಂಡಿರುವ ಕಾರ್ಯಕ್ರಮಗಳೇನು

ಊ) ಕಳೆದ 3 ವರ್ಷಗಳಲ್ಲಿ ರಾಜ್ಯದ ಯಾವ ಯಾವ ಭಾಗದಲ್ಲಿ ಜಾನುವಾರುಗಳು ರೋಗಕ್ಕೆ ಗುರಿಯಾಗಿದ್ದವು

ಋ) ಯಾವ ಯಾವ ರೋಗದಿಂದ ಎಷ್ಟು ಜಾನುವಾರುಗಳು ಸತ್ತಿವೆ (ವರ್ಗವಾರು ಮಾಹಿತಿ ನೀಡುವುದು).

ಎ) ರೋಗ ತಡೆಗಟ್ಟುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ವರ್ಷವಾರು ಮಾಹಿತಿ ಲಭ್ಯವಿರುವುದಿಲ್ಲ ಆದರೆ 1997ರಲ್ಲಿ ಹಾಗೂ 2003ರಲ್ಲಿ ನಡೆಸಲಾದ ಗಣತಿಯ ವರ್ಗವಾರು ಮಾಹಿತಿ ಈ ಕೆಳಕಂಡಂತಿದೆ

(ಲಕ್ಷಗಳಲ್ಲಿ)

ಕ್ರ ಸಂ	ವರ್ಗಗಳ	1997ರ ಜಾನುವಾರು ಗಣತಿಯಂತೆ	2003ರ ಜಾನುವಾರು ಗಣತಿಯಂತೆ	ಶೇಕಡವಾರು ವ್ಯತ್ಯಾಸ
1	2	3	4	5
1	ದನಗಳು	108 31	95 39	−11 93
2	ಎಮ್ಮೆಗಳು	43 67	39 99	−8.92
3	ಕುರಿಗಳು	80 03	72 56	−9 34
4	ಮೇಕೆಗಳು	48 75	44 84	−8 02
5	ಹಂದಿಗಳು	4 05	3 12	−22 95
6	ನಾಯಿಗಳು	21 39	26 85	+25 25
7	ಇತರೆ	0 68	0 45	−33 82
	ಒಟ್ಟು	306 88	283 12	−7 74

ಇ) 2003ರ ಜಾನುವಾರು ಗಣತಿಯ ಪ್ರಕಾರ 283 12 ಲಕ್ಷ ಜಾನುವಾರುಗಳಿವೆ (ವರ್ಗವಾರು ವಿವರ ಮೇಲ್ಕಂಡಂತಿದೆ) (ಕಾಲಂ ನಂ 4)

ಈ) ಪಶುಗಣತಿಯನ್ನು 5 ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ

ಉ) 1 ಆರೋಗ್ಯ ರಕ್ಷಣೆ

2. ಮುಂಜಾಗ್ರತೆ ಲಸಿಕೆ ಕಾರ್ಯಕ್ರಮ

3 ತಳಿ ಅಭಿವೃದ್ಧಿ ಸೇವೆ

4 ಜಾನುವಾರು ರೋಗ ತಪಾಸಣೆ ಪ್ರಯೋಗಾಲಯ ಸ್ಥಾಪನೆ

5 ಜಾನುವಾರು ಆರೋಗ್ಯ ಮತ್ತು ಬರಡು ರಾಸು ಚಿಕಿತ್ಸಾ ಶಿಬಿರಗಳು

6 ಮೇವು ಅಭಿವೃದ್ಧಿ

7 ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ ಸ್ಥಾಪನೆ

8 ವಿಸ್ತರಣಾ ಚಟುವಟಿಕೆಗಳು ಸಾಮಾಜಿಕ ಆರ್ಥಿಕ ಕಾರ್ಯದಡಿಯಲ್ಲಿ ಜಾನುವಾರುಗಳ ವಿತರಣೆ

ಊ) ರಾಜ್ಯದ ಎಲ್ಲಾ ಭಾಗಗಳಲ್ಲಿ ರೋಗಗಳು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತದೆ

ಋ) ರೋಗಗಳಿಂದ ಸತ್ತ ಸಂಖ್ಯೆ

ಕಾಯಿಲೆಯ ಹೆಸರು	2001–02	2002–03	2003–04
ಕರಳುಬೇನೆ	304	223	101
ಕಾಲುಬಾಯಿ ಜ್ವರ	593	236	40
ನರಡಿ	173	174	131
ಕುರಿ ಮತ್ತು ಅಡು ಸಿಡುಬು	339	420	144
ಪಿ ಪಿ ಆರ್	–	777	308
ನೀಲಿನಾಲಿಗೆ	355	37	33
ಹುಚ್ಚುರೋಗ	37	43	14

ಎ) 1 ರೋಗಗಳ ಬಗ್ಗೆ ಕಣ್ಣಾವಲು ಯೋಜನೆ ಮೂಲಕ ಒಂದು ತಿಂಗಳು ಮುಂಚೆ ಸಂಭವನೀಯ ರೋಗಗಳ ಬಗ್ಗೆ ಮಾಹಿತಿ ನೀಡುವಿಕೆ

2 ಮುಂಜಾಗ್ರತೆಯಾಗಿ ರೋಗ ನಿರೋಧಕ ಚುಚ್ಚುಮದ್ದು ನೀಡುವುದು

3 ವಿಸ್ತರಣಾ ಚಟುವಟಿಕೆ ಮೂಲಕ ರೈತರಲ್ಲಿ ಜಾಗೃತಿ ಮೂಡಿಸುವುದು

477(750) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿಯ ವ್ಯಾಪ್ತಿಯಲ್ಲಿ ಹೂವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೂವನ್ನು ಮಾರುಕಟ್ಟೆಗೆ ರವಾನಿಸುವ ಮೊದಲು ಶೇಖರಣೆ ಮಾಡುವುದಕ್ಕಾಗಿ ಶಿಥಲಗಾರವನ್ನು ನಿರ್ಮಿಸುವ ಬಗ್ಗೆ ಸರ್ಕಾರ ಯೋಚಿಸುವುದೇ

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಬಂದಿದೆ

ಆ) ಹೌದು ಹೂವು ಸೇರಿದಂತೆ ತೋಟಗಾರಿಕೆ ಉತ್ಪನ್ನಗಳ ಶೇಖರಣೆಗೆ ಶೈತ್ಯಾಗಾರಗಳನ್ನು ನಿರ್ಮಿಸಲು ಸಹಕಾರ ಸಂಘಗಳು/ಖಾಸಗಿಯವರಿಗೆ ನೆರವು ನೀಡಲಾಗುವುದು ಆದರೆ ಸರ್ಕಾರದ ವತಿಯಿಂದ ಶೈತ್ಯಾಗಾರಗಳನ್ನು ನಿರ್ಮಿಸುವ ಯೋಜನೆ ಇರುವುದಿಲ್ಲ

ಇ) ಸಹಕಾರ ಸಂಘಗಳು/ಖಾಸಗಿಯವರು ಶೈತ್ಯಾಗಾರ ನಿರ್ಮಿಸಲು ಮುಂದೆ ಬಂದಲ್ಲಿ ಭಾರತ ಸರ್ಕಾರದಸ ರಾಷ್ಟ್ರೀಯ ತೋಟಗಾರಿಕೆ ಮಂಡಳಿ/ಎನ್ ಸಿ ಡಿ ಸಿ ಸಂಸ್ಥೆಗಳು ಒದಗಿಸುವ ಹಣಕಾಸಿನ ಸಾಲ ಸೌಲಭ್ಯಗಳನ್ನು ಪಡೆಯಲು ಶಿಫಾರಸ್ಸು ಮಾಡಲಾಗುವುದು ತೋಟಗಾರಿಕೆ ಶೈತ್ಯಾಗಾರಗಳು ಬಳಸುವ ಪ್ರತಿ ಯೂನಿಟ್ ವಿದ್ಯುಚ್ಛಕ್ತಿಗೆ ರೂ 1 ರಂತೆ ಸಹಾಯಧನ ಒದಗಿಸಲಾಗುವುದು

479(754) ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ